ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ....

(ಗೊಂದಲ)

ಅಧ್ಯಕ್ಷರು : ನೀವು ಮತ್ತೆ ಮತ್ತೆ ಅದನ್ನೇ ಕೇಳುತ್ತಾ ಇದ್ದರೆ ಹೇಗೆ? ಆಗ ನಾವು ಪುನರ್ ಪರಿಶೀಲನೆ ಬಗ್ಗೆ ವಿಚಾರ ಮಾಡೋಣ. ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ದಿನಾಂಕ 23ನೇ ಅಕ್ಟೋಬರ್ 2000ರಂದು ನಡೆದ ಕರ್ನಾಟಕ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಅ) ಈಗಾಗಲೇ ಒದಗಿಸಲಾಗಿರುವ ವಿಧಾನಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ ದಿನಾಂಕ 27ನೇಅಕ್ಟೋಬರ್ ಹಾಗೂ ದಿನಾಂಕ 2ಮತ್ತು 3ನೇ ನವೆಂಬರ್ 2000ರಂದು ಉಪವೇಶವಗಳಿರುವುದಿಲ್ಲ, ಅಂದರೆ ಮೊದಲು ಪ್ರಕಟಗೊಂಡಂತೆ ಈ ದಿನಾಂಕದಂದು ಇತ್ತು, ಆದರೆ ಈಗ ಇರುವುದಿಲ್ಲ, ದಿನಾಂಕ 6, 7, 8, 9 ಮತ್ತು 10ನೇ ನವೆಂಬರ್‌ಗಳಂದು ಈ ಹಿಂದೆ ನಿಗದಿಪಡಿಸಿದ ಕಾರ್ಯಕ್ರಮದಂತೆ ಉಪವೇಶನಗಳಿರುವುದು.

ಆ) ಈ ಹಿಂದೆ ಒದಗಿಸಲಾಗಿದ್ದ ವಿಧಾನ ಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ ದಿನಾಂಕ 10ನೇ ನವೆಂಬರ್, 2000ವರೆವಿಗೆ ಕಾರ್ಯಕ್ರಮಗಳನ್ನು ನಿಗದಿಗೊಳಿಸಿದ್ದು, ಸದನದ ಕಾರ್ಯಕಲಾಪಗಳನ್ನು ದಿನಾಂಕ 13, 14, 15, 16 ಮತ್ತು 17ನೇ ನವೆಂಬರ್‌ಗಳಂದು ಮುಂದುವರಿಸಲು ಬಿ.ಎ.ಸಿ. ಮೀಟಿಂಗ್‌ನಲ್ಲಿ ತೀರ್ಮಾನಿಸಲಾಗಿದೆ.

ಇ) ದಿನಾಂಕ 27ನೇ ಅಕ್ಟೋಬರ್ 2 ಮತ್ತು 3ನೇ ನವೆಂಬರ್ 2000ದಂದು ಇದ್ದ ನಿಗಧಿತ ಪ್ರಶ್ನೆಗಳ ಪಟ್ಟಿಗಳನ್ನು ಕ್ರಮವಾಗಿ 15, 16 ಮತ್ತು 17ನೇ ನವೆಂಬರ್, 2000ಗಳಂದು ತೆಗೆದುಕೊಳ್ಳಲಾಗುತ್ತದೆ, ಮತ್ತು ಮುಂದುವರಿಸಿದ ಉಪವೇಶನದಲ್ಲಿ ದಿನಾಂಕ 13 ಮತ್ತು 14ನೇ ನವೆಂಬರ್‌ಗಳಂದು ಕ್ರಮವಾಗಿ ಆ ಮತ್ತು ಆ ಸಮೂಹಗಳಲ್ಲಿ ಬರುವ ಇಲಾಖೆಗಳಿಗೆ ಅಂದರೆ ಆಯಾ ದಿವಸಗಳಿಗೆ ಬರುವ ಸಂಬಂಧಿಸಿದ ಪ್ರಶ್ನೆಗಳನ್ನು ಮಾನ್ಯ ಸದಸ್ಯರಿಂದ ಸ್ವೀಕರಿಸಲಾಗುವುದು. ಇದನ್ನು ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00ಗಂಟೆಗೆ ಸೇರುವುದು.

(ಸದನವು ಸಂಜೆ 5ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 25ನೇ ಅಕ್ಟೋಬರ್ ಮಾಹೆ 2000ದ ಬುಧವಾರದಂದು ಬೆಳಿಗ್ಗೆ 11.00ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿನ್ನೆ ಮಾನ್ಯ ಸದಸ್ಯರ ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು:- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು.ತುಮಕೂರು, ಕಾಸೂ. 170 - 350 ಪುಸ್ತಕಗಳು ದಿ: 13-12-2002.